8TH SEPTEMBER 1995

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ 8ನೇ ಸೆಪ್ಟೆಂಬರ್ ೧೯೯೫ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಗ್ಗೆ ೧೦-೧೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ. ಮುಂದಿನ ಕುರ್ಚಿಯಲ್ಲಿ ಮಂತ್ರಿಗಳು ಬೇಕಾಗುತ್ತದೆ. ಇದರಿಂದ ಸರ್ಕಾರಕ್ಕೆ ಸೀರಿಯಸ್‌ನೆಸ್ ಇಲ್ಲ ಎಂದಾಗುತ್ತದೆ. ನಾವು ಇವತ್ತು 10 ಗಂಟೆಗೆ ಕುಳಿತುಕೊಳ್ಳಬೇಕಾಗಿತ್ತು. ಆದರೆ 15 ನಿಮಿಷ ತಡವಾಗಿ ಸೇರುತ್ತಿದ್ದೇವೆ.

ಅಧ್ಯಕ್ಷರು : ನಾವು ಶುರು ಮಾಡಿಬಿಡೋಣ. ಅವರೆಲ್ಲಾ ಬಂದು ಬಿಡುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರೆ ನಾವು ಅಜೆಂಡಾ ಕಳುಹಿಸಿದ್ದೇವೆ. ನಿನ್ನೆಯೂ ಸಹ ಇಷ್ಟೊತ್ತಿಗೆ ಎಂದು ಹೇಳಿದ್ದೇವೆ. ಬೆಲ್ ಹಾಕಿದ್ದೇವೆ, ಕೋರಂ ಇದೆ. ನಾನು ಬಂದಿದ್ದೇನೆ, ನಮ್ಮ ಕೆಲಸ ನಾವು ಶುರು ಮಾಡೋಣ. ಯಾರು ಬಂದಿಲ್ಲ, ಏಕೆ ಬಂದಿಲ್ಲ. ದಯಮಾಡಿ ಅದನ್ನು ನನಗೆ ಬಿಡಿ. ನೀವು ನೋಡುತ್ತಿದ್ದೀರಿ, ಸ್ವಯಂಪ್ರೇರಿತವಾಗಿ ನಾನು ಕೆಲವು ಸಂದರ್ಭದಲ್ಲಿ ಏನೆಲ್ಲಾ ಹೇಳಬೇಕೊ ಅದನ್ನೆಲ್ಲಾ ಹೇಳುತ್ತಿದ್ದೇನೆ. ನಾನು ಇದನ್ನು ಗಮನಿಸುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಡುವವರು ಇಲ್ಲವಲ್ಲ.

ಅಧ್ಯಕ್ಷರು : ನಾನು ಏನು ಹೇಳುತ್ತಿದ್ದೇನೆಂದರೆ ಜ್ಞಾನೇಂದ್ರರವರೆ, ನೀವು ಮಾತನಾಡಿ ಅದರ ಗಾಂಭೀರ್ಯವನ್ನು ಕಳೆಯಬೇಡಿ. ನಿಮ್ಮ ಪ್ರಶ್ನೆಗೆ ಸಂಬಂಧಪಟ್ಟವರು ಉತ್ತರ ಮಾಡುವುದಕ್ಕೆ ಇಲ್ಲದೆ ಹೋದರೆ, ಏನು ಹೇಳಬೇಕು ಎಂದು ನನಗೆ ಬಿಡಿ. ಅದು ನನ್ನ ಗೌರವದ ಪ್ರಶ್ನೆ ನೀವು ಹೇಳಿ ನಾನು ಅದನ್ನು ಕೇಳಬೇಕಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮುಂದಿನ ಬೆಂಚಿನಲ್ಲಿ ಹಿರಿಯರು ಬರದೆ ಇದ್ದರೆ, ಕ್ಯಾಬಿನೆಟ್ ಸಚಿವರು ಬರದೆ ಇದ್ದರೆ ಅದು ಈ ಸದನಕ್ಕೆ ಮಹತ್ವ ಬರುವುದಿಲ್ಲ.

ಅಧ್ಯಕ್ಷರು : ಅದನ್ನು ನಾನು ಹೇಳುತ್ತೇನೆ.